Government of Karnataka

Deposition Sheet Form No. R.P. 57

ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ಲಿಂಗಸುಗೂರು

ಒ.ಎಸ್ ನಂಬರ 111/2023

ಸಿ.ಡಬ್ಲೂ-2

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಜಹಾಂಗೀರ್ |
| ತಂದೆಯ ಹೆಸರು | ಃ | ಮೆಹೆಬೂಬ್ ಸಾಬ್ |
| ವಯಸ್ಸು | ಃ | 35 ವರ್ಷ |
| ಉದ್ಯೋಗ | ಃ | ಕಿರಿಯ ಅಭಿಯಂತರರು, ಪುರಸಭೆ |
| ವಾಸಸ್ಥಳ | ಃ | ಲಿಂಗಸುಗೂರು |

**ದಿ.03-08-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.**

***ಮುಖ್ಯ ವಿಚಾರಣೆ:***

ನಾನು ಲಿಂಗಸೂಗೂರು ಪುರಸಭೆಯಲ್ಲಿ 19-06-2025 ರಿಂದ ಇಲ್ಲಿಯವರೆಗೆ ಕಿರಿಯ ಅಭಿಯಂತರರಾಗಿ ಕರ್ತವ್ಯ ನಿರ್ವಹಿಸುತ್ತೀದ್ದೇನೆ.

ನಾನು ಮುಖ್ಯ ಅಧಿಕಾರಿಗಳ ಆದೇಶದ ಮೇರೆಗೆ ಕಮೀಷನ್ ಕಾರ್ಯಕ್ಕಾಗಿ ದಿ. 11-07-2025 ರಂದು ಬೆಳಿಗ್ಗೆ 11-23 ಗಂಟೆಗೆ ವಾ.ನಂ.20 ರಲ್ಲಿ ಮುದಗಲ್ ರಸ್ತೆ ಅಗಸಿ ಒಳಗಡೆ ಕಸಬಾ ಲಿಂಗಸುಗೂರುನಲ್ಲಿ ಬರುವ ಆಸ್ತಿ ನಿರ್ಧರಣ ಸಂಖ್ಯೆ 3-2-140 ಮತ್ತು 3-2-140/1 ರಲ್ಲಿ ಸ್ಥಳ ಪರಿಶಿಲಿಸಿ ಅಳತೆ ಮಾಡಿ ಪೂರ್ವ ಪಶ್ಚಿಮ 18 ಮೀಟರ್, ಉತ್ತರ ದಕ್ಷಿಣ 21 ಮೀಟರ್ ಇರುವುದು ಕಂಡು ಬಂದಿರುತ್ತದೆ . ಸ್ಥಳದಲ್ಲಿ ಪಂಚನಾಮೇ ಜರುಗಿಸಿರುತ್ತೇನೆ. ಜಿ. ಪಿ.ಎಸ್ ಮತ್ತು ಫೋಟೊವನ್ನು ತೆಗೆಸಿರುತ್ತೇವೆ. ಆಸ್ತಿ ಸಂಖ್ಯೆ 3-2-140/1 ರಲ್ಲಿ 3-2-134/1 ಒಂದರ ಮೇಲೊಂದು ಆಸ್ತಿಗಳು ಕಂಡು ಬಂದಿರುತ್ತವೆ. ಎರಡು ಆಸ್ತಿಗಳಿಗೆ ಖಾತಾ ನಕಲುಗಳನ್ನು ಕೊಟ್ಟಿರುತ್ತಾರೆ.

ಪಂಚನಾಮೆ ವರದಿಯನ್ನು ಈಗಾಗಲೇ ನಿಸಿ.1 ಎಂದು ಗುರುತಿಸಲಾಗಿದ್ದು ಸಾಕ್ಷಿ ಸಹಿಯನ್ನು ನಿಸಿ.1(ಬಿ) ಎಂದು ಗುರುತಿಸಲಾಯಿತು. ನಕಾಶೆಯನ್ನು ನಿಸಿ.2 ಸಾಕ್ಷಿ ಸಹಿಯನ್ನು ನಿಸಿ.2(ಎ) ಎಂದು, ಪಂಚನಾಮೆ ಚಕ್ಕಬಂದಿ ವರದಿಯನ್ನು ನಿಸಿ.3 ಸಹಿಯನ್ನು ನಿಸಿ.3(ಎ) ಎಂದು, ಜಿಪಿಎಸ್ ಫೋಟೊಗಳನ್ನು ಒಟ್ಟಾಗಿ ನಿಸಿ.4 ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಶ್ರೀ ಹೆಚ್.ಬಿ.,ವಕೀಲರಿಂದ:-**

ನಾನು ಪುರಸಭೆಯಲ್ಲಿ ಕಿರಿಯ ಅಭಿಯಂತರರು ಆಗಿ ಕೆಲಸ ಮಾಡುತ್ತಿದ್ದೆನೆ. ನಮಗೆ ಕೋರ್ಟನಿಂದ ಕಮೀಷನ್ ವಾರಂಟ್ ನನಗೆ ಬಂದಿರುವುದಿಲ್ಲ ನಮ್ಮ ಮುಖ್ಯ ಅಧಿಕಾರಿಗೆ ಬಂದಿರುತ್ತದೆ. ನಮ್ಮ ಮುಖ್ಯ ಅಧಿಕಾರಿಗಳು ನಮಗೆ ಕಮೀಷನ್ ಕೆಲಸಕ್ಕೆ ನೇಮಕ ಮಾಡಿದ್ದರು. ನೇಮಕ ಆದೇಶವನ್ನು ಕೋರ್ಟಗೆ ಕೋಟ್ಟಿರುತ್ತೆವೆ. ನನಗೆ ಸ್ಥಳ ಪರಿಶೀಲನೆ ಮಾಡಿ ವಸ್ತು ಸ್ಥಿತಿ ಏನು ಇದೆ ಎಂದು ವರದಿ ಮಾಡಲು ಮತ್ತು ಚಕ್ಕಬಂದಿ ನಮೂದಿಸಲು ಆದೇಶ ಮಾಡಿದ್ದರು. ಆ ದಿನ ನಮ್ಮ ಕಚೇರಿ ಯಿಂದ ನಾನು, ಕಂದಾಯ ಅಧಿಕಾರಿಗಳು ಮತ್ತು ಕಂದಾಯ ನೀರಿಕ್ಷಕರು, ಕರವಸುಲಿಗಾರರು ಸ್ಥಳಕ್ಕೆ ಹೋಗಿರುತ್ತೇವೆ. ಸಾಮಾನ್ಯವಾಗಿ ನ್ಯಾಯಲಯದಿಂದ ಕಮೀಷನ್ ಕೆಲಸಕ್ಕೆ ನೇಮಿಸಿದಾಗ ವಾದಿ ಮತ್ತು ಪ್ರತಿವಾದಿಯವರಿಗೆ ನೋಟಿಸು ಕೊಡುತ್ತೇವೆ ಎಂದರೆ ಸರಿ. ವಾದಿ ಮತ್ತು ಪ್ರತವಾದಿಯರಿಗೆ ನೋಟಿಸು ಕೊಟ್ಟ ಬಗ್ಗೆ ನನಗೆ ಮಾಹಿತಿ ಇಲ್ಲ. ನಾವು ಸ್ಥಳಕ್ಕೆ ಹೋದಾಗ ವಾದಿ ಮತ್ತು ಪ್ರತವಾದಿಯರು ಹಾಜರಿದ್ದ ಬಗ್ಗೆ ನನಗೆ ಗೊತ್ತಿಲ್ಲ. ನಿಸಿ-4 ಫೋಟೋ ತೋರಿಸಲಾಗಿ ಅದರಲ್ಲಿ ವಾದಿ ಮತ್ತು ಪ್ರತಿವಾದಿ ಯಾರು ಎಂದು ಹೇಳಲಾಗುವುದಿಲ್ಲ. ಜಿಪಿಎಸ್ ಫೊಟೊದಲ್ಲಿ ಯಾವ ಆಸ್ತಿಗೆ ಸಂಬಂಧಿಸಿದವು ಎಂದು ನಮೂದು ಇಲ್ಲ ಎಂದರೆ ಸರಿ. ಆ ದಿನ ನಮ್ಮ ಮುಖ್ಯ ಅಧಿಕಾರಿಗಳು ಸ್ಥಳಕ್ಕೆ ಬಂದಿರುವುದಿಲ್ಲ ಎಂದರೆ ಸರಿ. ನನಗೆ ನ್ಯಾಯಲಯದಿಂದ ಕಮೀಷನ್ ಮಾಡಲು ಆದೇಶ ಆಗಿರುವುದಿಲ್ಲ ಎಂದರೆ ಸರಿ. ಪಂಚನಾಮೆಯನ್ನು ಸ್ಥಳದಲ್ಲೆ ಬರೆಯಬೇಕು ಎಂದರೆ ಸರಿ. ಆ ರೀತಿ ಬರೆದಿಲ್ಲ ನಾವು ಕಚೇರಿಗೆ ಬಂದು ಪ್ರಿಂಟ್ ತೆಗೆದ ಮೇಲೆ ಅವರ ಸಹಿ ತೆಗೆದುಕೊಂಡಿರುತ್ತೇವೆ. ನಮ್ಮ ಕಛೇರಿಯಲ್ಲಿ ಪಂಚನಾಮ ವರದಿಯನ್ನು ತಯಾರಿಸಿ ಪಂಚರ ಸಹಿ ಪಡೆದಿರುತ್ತೇವೆ

ಎಂದರೆ ಸರಿ. ಸ್ಥಳಕ್ಕೆ 11-07-2025 ರಂದು ಹೋಗಿ ಪರಿಶೀಲನೆ ಮಾಡಿರುತ್ತೇವೆ. ದಿ.11-07-2025 ರಂದು ಪಂಚನಾಮೆ ಮಾಡಿರುತ್ತೇವೆ. ಆಸ್ತಿ ನಂ.3-2-140 ಮತ್ತು 3-2-140/1 ಸಬಂಧಿಸಿದಂತೆ ಚಕ್ಕಬಂದಿ ನನಗೆ ಹೇಳಲಾಗುವುದಿಲ್ಲ. ನಾವು ಮುಖ್ಯ ಅಧಿಕಾರಿಗಳ ಆದೇಶದ ಮೇರೆಗೆ ನಕಾಶೆ ತಯಾರಿಸಿರುತ್ತೇವೆ. ನಾನು ಆ ದಿನ ಸ್ಥಳಕ್ಕೆ ಹೋಗಿಲ್ಲ. ನಮಗೆ ಮುಖ್ಯ ಅಧಿಕಾರಿಗಳು ಯಾವುದೇ ಅದೇಶ ಮಾಡಿಲ್ಲ ವಾದಿಗೆ ಸಹಾಯ ಮಾಡಲು ಕಚೇರಿಯಲ್ಲೇ ಕುಳಿತುಕೊಂಡು ಪಂಚನಾಮೆ ವರದಿಯನ್ನು ತಯಾರಿಸಿರುತ್ತೇವೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,

ಲಿಂಗಸಗೂರು.